ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ. ಸೋಮಶೇಖರ್

ಶ್ರೀ ನಾಗಲಿಂಗಪ್ಪ ವಿರುದ್ಧ ಕರ್ನಾಟಕ ರಾಜ್ಯ, ಮಹಿಳಾ ಪೊಲೀಸ್ ಠಾಣೆ, ಮೈಸೂರು

ಕ್ರಿಮಿನಲ್ ಪುನರೀಕ್ಷಣಾ ಅರ್ಜಿಸಂಖ್ಯೆ: 558/2011,ದಿನಾಂಕ: 17 ನೇ ಡಿಸೆಂಬರ್, 2019.

ಆದೇಶ

ನ್ಯಾಯಮೂರ್ತಿ ಶ್ರೀ ಕೆ. ಸೋಮಶೇಖರ್:

ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳಾದ ಶ್ರೀ ಪಿ. ನಟರಾಜು ಮತ್ತು ರಾಜ್ಯದ ಪರ ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ಪೀಡರ್ರಾದ ಚ ಶ್ರೀ ತೇಜೇಶ್ ಪಿ ರವರ ವಾದಗಳನ್ನು ನಾವು ಆಲಿಸಿದ್ದೇವೆ.

2. ಅಧಿವಿಚಾರಣಾ ನ್ಯಾಯಾಲಯವು ಅಪೀಲನ್ನು ಭಾಗಶಃ ಪುರಸ್ಕರಿಸಿ,ದಿನಾಂಕ: 27-04-2006 ರಂದು ಸಿ.ಸಿ.ಸಂಖ್ಯೆ:504/2002 ರಲ್ಲಿ ಹೊರಡಿಸಿದ ಅಪರಾಧ ನಿರ್ಣಯ ಮತ್ತು ಶಿಕ್ಷೆಯ ಪ್ರಶ್ನೆತ ತೀರ್ಪನ್ನು ಮಾರ್ಪಡಿಸಿ ಅಪೀಲು ನ್ಯಾಯಾಲಯವು,ದಿನಾಂಕ: 07-03-2011 ರಂದು ಅಪರಾಧ ಅಪೀಲುಸಂಖ್ಯೆ: 107/2006 ರಲ್ಲಿ ಹೊರಡಿಸಿದ ತೀರ್ಪಿನ ವಿರುದ್ಧ ಈ ಅಪರಾಧ ಪುನರೀಕ್ಷಣಾ ಅರ್ಜಿಯನ್ನು ನಿರ್ದೇಶಿಸಲಾಗಿದೆ.ಅಧಿವಿಚಾರಣಾ ನ್ಯಾಯಾಲಯವು, ಭಾರತ ದಂಡ ಸಂಹಿತೆಯ 498- ಎ ಮತ್ತು 506 ನೇ ಪ್ರಕರಣಗಳ ಮೇರೆಗೆ ಹಾಗೂ ವಧು ವರದಕ್ಷಿಣೆ ನಿಷೇಧ ಅಧಿನಿಯಮದ 4 ನೇ ಪ್ರಕರಣದ ಮೇರೆಗಿನ ಅಪರಾಧಗಳಿಗಾಗಿ ಇದರಲ್ಲಿನ 1 ನೇ ಸಂಖ್ಯೆಯ ಆಪಾದಿತ-ಅರ್ಜಿದಾರನನ್ನು ನಿರ್ಣೀತ ಅಪರಾಧಿಯೆಂದು ತೀರ್ಮಾನಿಸಿದೆ ಮತ್ತು ಭಾರತ ದಂಡ ಸಂಹಿತೆಯ 498- ಎ ಪ್ರಕರಣದ ಮೇರೆಗಿನ ಅಪರಾಧಕ್ಕಾಗಿ ಆಪಾದಿತನನ್ನು ಒಂದು ವರ್ಷ ಅವಧಿಯವರೆಗೆ ಸಾದಾ ಕಾರವಾಸ ಶಿಕ್ಷೆಯನ್ನು ಹಾಗೂ 2,000/-ರೂಪಾಯಿಗಳ ಜುಲ್ಮಾನೆಯನ್ನು ಸಂದಾಯ ಮಾಡುವ ಶಿಕ್ಷೆಗೆ ಗುರಿಪಡಿಸಿದೆ; ಭಾರತ ದಂಡ ಸಂಹಿತೆಯ 506 ನೇ ಪ್ರಕರಣದ ಮೇರೆಗಿನ ಅಪರಾಧಕ್ಕಾಗಿ ಆರು ತಿಂಗಳುಗಳ ಅವಧಿಯವರೆಗೆ ಸಾದಾ ಕಾರವಾಸ ಶಿಕ್ಷೆ ಎ ಹಾಗೂ 1,000/-ರೂಪಾಯಿಗಳ ಜುಲ್ಮಾನೆಯನ್ನು ಸಂದಾಯ ಮಾಡುವ ಶಿಕ್ಷೆಗೆ ಗುರಿಪಡಿಸಿದೆ; ವಧು-ವರದಕ್ಷಿಣೆ ನಿಷೇಧ ಅಧಿನಿಯಮದ 4 ನೇ ಪ್ರಕರಣದ ಮೇರೆಗಿನ ಅಪರಾಧಕ್ಕಾಗಿ ಒಂದು ವರ್ಷ ಅವಧಿಯವರೆಗೆ ಸಾದಾ ಕಾರವಾಸ ಶಿಕ್ಷೆ ಹಾಗೂ 2,000/-ರೂಪಾಯಿಗಳ ಜುಲ್ಮಾನೆಯನ್ನು ಸಂದಾಯ ಮಾಡುವ ಶಿಕ್ಷೆಗೆ ಗುರಿಪಡಿಸಿತ್ತು.ಈ ಶಿಕ್ಷೆಯನ್ನು ಸಹವರ್ತಿಯಾಗಿ ಮುಂದುವರೆಸಬೇಕಾಗಿತ್ತು.ಆದಾಗ್ಯೂ, ಅಪೀಲು ನ್ಯಾಯಾಲಯವು, ಅಧಿವಿಚಾರಣಾ ನ್ಯಾಯಾಲಯ ನೀಡಿದ ಸದರಿ ತೀರ್ಪನ್ನುದಿನಾಂಕ: 07-03-2011ರ ಆದೇಶದ ಮೂಲಕ ಮಾರ್ಪಾಡು ಮಾಡಿತ್ತು.ಮತ್ತು ಭಾರತ ದಂಡ ಸಂಹಿತೆಯ 498- ಎ ಪ್ರಕರಣದ ಮತ್ತು ವಧು-ವರದಕ್ಷಿಣೆ ನಿಷೇಧ ಅಧಿನಿಯಮದ 4 ನೇ ಪ್ರಕರಣದ ಮೇರೆಗೆ ಪ್ರತಿ ಅಪರಾಧಕ್ಕಾಗಿ ಆರು ತಿಂಗಳುಗಳ ಅವಧಿಯವರೆಗೆ ಸಾದಾ ಕಾರಾವಾಸ ಶಿಕ್ಷೆ ಎ ಹಾಗೂ 500/-ರೂಪಾಯಿಗಳ ಜುಲ್ಮಾನೆಯನ್ನು ಸಂದಾಯ ಮಾಡುವ ಶಿಕ್ಷೆಯನ್ನು ಕಡಿಮೆ ಮಾಡಿತ್ತು ಮತ್ತು ಭಾರತ ದಂಡ ಸಂಹಿತೆಯ 34 ನೇ ಪ್ರಕರಣದೊಂದಿಗೆ ಓದಲಾದ 506 ನೇ ಪ್ರಕರಣದ ಮೇರೆಗೆ ನಿರ್ಣೀತ ಅಪರಾಧವನ್ನು ರದ್ದು ಮಾಡಿತ್ತು.

3. ಪ್ರಾಸಿಕ್ಯೂಷನ್ ಮಂಡಿಸಿದ ವಾದದ ಪ್ರಕಾರ ಅರ್ಜಿಯ ವಾಸ್ತವಿಕ ಅಂಶವು ಈ ಮುಂದಿನಂತಿದೆ:

1 ನೇ ಸಂಖ್ಯೆಯ ಆಪಾದಿತನೆಂದು ಆಪಾದಿಸಲಾದ ಅರ್ಜಿದಾರ ನಾಗಲಿಂಗಪ್ಪನು ಫಿರ್ಯಾದುದಾರಳಾದ ಭಾಗ್ಯಮ್ಮನ ಪತಿಯಾಗಿದ್ದಾನೆ.ಭಾಗ್ಯಮ್ಮಳು 1 ನೇ ಸಂಖ್ಯೆಯ ಆಪಾದಿತ/ಪತಿ, 2 ನೇ ಮತ್ತು 3 ನೇ ಸಂಖ್ಯೆಯ ಆಪಾದಿತ ಅತ್ತೆ-ಮಾವ ಮತ್ತು 4 ನೇ ಮತ್ತು 5 ನೇ ಸಂಖ್ಯೆಯ/ಭಾವ-ಮೈದುನಂದಿರುಗಳ ವಿರುದ್ಧ ದೂರನ್ನು ದಾಖಲಿಸಿದ್ದಾಳೆ.ಮುಂದುವರೆಸುತ್ತಾ, ತಾನುದಿನಾಂಕ: 03-07-1994 ರಂದು 1 ನೇ ಸಂಖ್ಯೆಯ ಆಪಾದಿತನನ್ನು ವಿವಾಹವಾಗಿದ್ದು, ಮದುವೆಯ ವೇಳೆಯಲ್ಲಿ, ಅರ್ಜಿದಾರರಿಗೆ ವರದಕ್ಷಿಣೆಯ ರೂಪದಲ್ಲಿ 10 ಗ್ರಾಂ ತೂಕದ ಒಂದು ಚಿನ್ನದ ಸರ ಮತ್ತು ಒಂದು ಜೊತೆ ಬಟ್ಟೆಗಳನ್ನು ನೀಡಲಾಯಿತು.ಮದುವೆಯ ನಂತರ, ಗಂಡ-ಹೆಂಡತಿಯರಿಬ್ಬರೂ ಅವಳ ಅತ್ತೆ-ಮಾವ ಮತ್ತು ಭಾವಮೈದುನರೊಂದಿಗೆ ವಾಸಿಸುತ್ತಿದ್ದರು.ಒಂದು ತಿ ಂ ಗಳ ನ ಂ ತರ, ಆಪಾದಿತರುಗಳೆಲ್ಲರೂ ಸಿಡಬ್ಲ್ಯು -1 ಭಾಗ್ಯಮ್ಮಗೆ ತನ್ನ ತವರು ಮನೆಯಿಂದ ಹೊಲಿಗೆಯಂತ್ರ, ಅರಾ ಮತ್ತು ಚಿನ್ನಾಭರಣಗಳನ್ನು ತರುವಂತೆ ಪೀಡಿಸಲಾರಂಭಿಸಿದರು.ಅವರ ಕಿರುಕುಳ ಸಹಿಸಲು ಸಾಧ್ಯವಾಗದೆ, ದೂರುದಾರಳು ತನ್ನ ಪತಿ-ಅರ್ಜಿದಾರರೊಂದಿಗೆ ಮೈಸೂರಿನ ವಿನಾಯಕ ನಗರದಲ್ಲಿ ಪ್ರತ್ಯೇಕ ಮನೆಯಲ್ಲಿ ವಾಸಿಸಲು ಪ್ರಾರಂಭಿಸಿದ್ದಳು.ಅವರು ವಿನಾಯಕ ನಗರದಲ್ಲಿದ್ದ ದೂರುದಾರಳ ಮನೆಗೆ ಆಗಾಗ್ಗೆ ಭೇಟಿ ನೀಡಿ ಕಿರುಕುಳ ನೀಡುವುದನ್ನು ೧ ಮುಂದುವರಿಸಿದ್ದರು ಎಂದು ಹೇಳಲಾಗಿದೆ.ಮುಂದುವರೆಸುತ್ತ,ದಿನಾಂಕ: 13-02-2002 ರ ಬೆಳಿಗ್ಗೆ 11:30 ರ ಸುಮಾರಿಗೆ 1 ರಿಂದ 5 ರವರೆಗಿನ ಸಂಖ್ಯೆಯ ಎಲ್ಲಾ ಆರೋಪಿಗಳು, ದೂರುದಾರಳ ಮೇಲೆ ಹಲ್ಲೆ ನಡೆಸಿ, ಅವಳನ್ನು ದುರ್ಭಾಷೆಯಲ್ಲಿ ನಿಂದಿಸಿದ್ದಾರೆ ಮತ್ತು ತವರು ಮನೆಯಿಂದ ವರದಕ್ಷಿಣೆ ರೂಪದಲ್ಲಿ ಹೊಲಿಗೆಯಂತ್ರ, ಅರಾ, ಚಿನ್ನದ ಆಭರಣಗಳು ಮತ್ತು 10,000/-ರೂಪಾಯಿಗಳ ನಗದನ್ನು ತೆಗೆದುಕೊಂಡು ಬರದಿದ್ದರೆ, ಅವಳ ಜೀವ ತೆಗೆಯುವುದಾಗಿ ಸಹ ಹೆದರಿಸಿದ್ದರು.ಆ ಕಾರಣದಿಂದಾಗಿ, ಸಿಡಬ್ಲ್ಯು -1 ಆರೋಪಿತ ವ್ಯಕ್ತಿಗಳೆಲ್ಲರ ವಿರುದ್ಧ ಕಾನೂನು ಕ್ರಮವನ್ನು ತೆಗೆದುಕೊಳ್ಳುವಂತೆ ಅವರ ವಿರುದ್ಧವಾಗಿ ದೂರನ್ನು ನೀಡಿದ್ದಳು.ದೂರು ದಾಖಲಾದ ಪರಿಣಾಮವಾಗಿ, ಮೊಕದ್ದಮೆಯನ್ನು ದಾಖಲಿಸಲಾಯಿತು ಮತ್ತು ತನಿಖಾಧಿಕಾರಿ ದೋಷಾರೋಪಣ ಪಟ್ಟಿಯನ್ನು ದಾಖಲಿಸಿದರು.ಆರೋಪಿಗಳ ವಿರುದ್ಧ ಆರೋಪಣೆಗಳನ್ನು ರೂಪಿಸಲಾಯಿತು ಮತ್ತು ಆರೋಪಿಗಳು ತಾವು ತಪ್ಪಿತಸ್ಥರಲ್ಲವೆಂದು ಮತ್ತು ಅಧಿವಿಚಾರಣೆಯನ್ನು ನಡೆಸಬೇಕೆಂದು ಕ್ಲೇಮು ಮಾಡಿದ್ದಾರೆ.ಪ್ರಾಸಿಕ್ಯೂಷನ್, ತನ್ನ ಮೊಕದ್ದಮೆಗೆ ಸಮರ್ಥನೆಯಾಗಿ, ಪಿಡಬ್ಲ್ಯೂ -1 ರಿಂದ ಪಿಡಬ್ಲ್ಯೂ ೧8 ರವರೆಗೆ ಎಂಟು ಸಾಕ್ಷಿದಾರರನ್ನು ವಿಚಾರಣೆ ಮಾಡಿದೆ.ಮತ್ತು ಪಿ 1 ರಿಂದ ಪಿ -6 ರವರೆಗಿನ ನಿಶಾನೆಗಳನ್ನು ಗುರುತು ಮಾಡಲಾಗಿದೆ.ಪ್ರಾಸಿಕ್ಯೂಷನ್ ಕಡೆಯ ವಾದಗಳ ಮುಕ್ತಾಯದ ನಂತರ, ದಂಡ ಪ್ರಕ್ರಿಯಾ ಸಂಹಿತೆಯ 313 ನೇ ಪ್ರಕರಣದ ಮೇರೆಗೆ ಉದ್ದೇಶಿಸಲಾದಂತೆ ದೋಷಾರೋಪಣೆಗೆ ಒಳಪಡಿಸುವ ಹೇಳಿಕೆಯನ್ನು ದಾಖಲಿಸಲಾಯಿತು.ಅಧಿವಿಚಾರಣಾ ನ್ಯಾಯಾಲಯವು, ಸಾಕ್ಷ್ಯವನ್ನು ದಾಖಲಿಸಿದ ನಂತರ ಮತ್ತು ಉಭಯ ಪಕ್ಷಕಾರರ ವಾದಗಳನ್ನು ಆಲಿಸಿದ ನಂತರ, ಭಾರತ ದಂಡ ಸಂಹಿತೆಯ 34 ನೇ ಪ್ರಕರಣದೊಂದಿಗೆ ಓದಲಾದ 498 ಎ ಮತ್ತು 506 ನೇ ಪ್ರಕರಣಗಳ ಮೇರೆಗೆ ಮತ್ತು ವರದಕ್ಷಿಣೆ ನಿಷೇಧ ಅಧಿನಿಯಮದ 4 ನೇ ಪ್ರಕರಣದ ಮೇರೆಗೆ ದಂಡನೀಯ ಅಪರಾಧಗಳಿಗಾಗಿ 1 ನೇ ಆರೋಪಿಯನ್ನು ಅಪರಾಧಿ ಎಂದು ನಿರ್ಣಯಿಸಲಾಗಿದ್ದರೂ, ನಿರಪರಾಧಿಯೆಂದು ನಿರ್ಣಯಿಸಲಾದಸಂಖ್ಯೆ: 2 ರಿಂದ 5 ರವರೆಗಿನ ಆರೋಪಿಗಳ ವಿರುದ್ಧ ಯಾವುದೇ ಸಾಕ್ಷ್ಯಗಳಿರಲಿಲ್ಲದ್ದರಿಂದ ಅವರನ್ನು ಖುಲಾಸೆ ಮಾಡಲಾಯಿತು.

ಅಧಿವಿಚಾರಣಾ ನ್ಯಾಯಾಲಯದ ಅಪರಾಧ ನಿರ್ಣಯದ ತೀರ್ಪು ಮತ್ತು ಶಿಕ್ಷೆಯಿಂದ ಬಾಧಿತನಾಗಿದ್ದ ಮೊದಲನೆಯ ಆಪಾದಿತನು ಅಪರಾಧ ಅಪೀಲುಸಂಖ್ಯೆ: 107/2006 ರ ಮೂಲಕ ಸದರಿ ತೀರ್ಪನ್ನು ಪ್ರಶ್ನಿಸಿದ್ದಾರೆ.ಅಪೀಲು ನ್ಯಾಯಾಲಯವು, ದಾಖಲೆಯಲ್ಲಿನ ಸಾಕ್ಷ್ಯವನ್ನು ವಿವೇಚಿಸಿದ ಮೇಲೆ, ಅಪೀಲನ್ನು

ಭಾಗಶಃ ಪುರಸ್ಕರಿಸಿ, ಆ ಮೂಲಕ ಭಾರತ ದಂಡ ಸಂಹಿತೆಯ 506 ನೇ ಪ್ರಕರಣದ ಮೇರೆಗಿನ ಅಪರಾಧಕ್ಕಾಗಿ ಆಪಾದಿತನನ್ನು ಖುಲಾಸೆಗೊಳಿಸಿ, ಶಿಕ್ಷೆಯನ್ನು ಕಡಿಮೆ ಮಾಡಿತು.ಆ ಮೂಲಕ ಆಪಾದಿತನು, ಭಾರತ ದಂಡ ಸಂಹಿತೆಯ 498 ಎ ಪ್ರಕರಣದ ಮತ್ತು ವರದಕ್ಷಿಣೆ ನಿಷೇಧ ಅಧಿನಿಯಮದ 4 ನೇ ಪ್ರಕರಣದ ಮೇರೆಗೆ ಪ್ರತಿ ಅಪರಾಧಕ್ಕೂ ಆರು ತಿಂಗಳ ಅವಧಿಯವರೆಗೆ ಸಾದಾ ಕಾರಾವಾಸದ ಶಿಕ್ಷೆಯನ್ನು ಮತ್ತು 500 ರೂಪಾಯಿಗಳ ಜುಲ್ಮಾನೆಯನ್ನು ಸಂದಾಯ ಮಾಡುವ ಶಿಕ್ಷೆಯನ್ನು ನಿರ್ದೇಶಿಸಲಾಯಿತು.

4. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಎಲ್ಲಾ ಸಮಂಜಸವಾದ ಅನುಮಾನಗಳನ್ನು ಮೀರಿ ಆಪಾದಿಸಲಾದ ಅಪರಾಧಗಳನ್ನು ಸಾಬೀತುಪಡಿಸದಿದ್ದರೂ ಸಹ, ಅರ್ಜಿದಾರನನ್ನು ತಪ್ಪಿತಸ್ಥರೆಂದು ಪರಿಗಣಿಸುವಲ್ಲಿ ಉಭಯ ನ್ಯಾಯಾಲಯಗಳು ತಪ್ಪು ಮಾಡಿವೆ ಎಂದು ವಾದಿಸಿರುತ್ತಾರೆ.ಪ್ರಾಸಿಕ್ಯೂಷನ್, ಭಾರತ ದಂಡ ಸಂಹಿತೆಯ 498 ಎ ಮತ್ತು 506 ನೇ ಪ್ರಕರಣಗಳ ಮೇರೆಗೆ ಮತ್ತು ವರದಕ್ಷಿಣೆ ನಿಷೇಧ ಅಧಿನಿಯಮದ 4 ನೇ ಪ್ರಕರಣದ ಮೇರೆಗಿನ ಆಪಾದನೆಗಳಿಗೆ ಸಂಬಂಧಿಸಿದ ಎಲ್ಲಾ ತರ್ಕಬದ್ಧ ವಾದ ಹಾಗೂ ಸಮ ೦ ಜಸವಾದ ಸಾಕ್ಷ್ಯಗಳನ್ನು ಮಂಡಿಸಿರುವುದಿಲ್ಲವೆಂಬುದು ಮಾನ್ಯ ನ್ಯಾಯವಾದಿಯ ವಾದವಾಗಿದೆ.

ಅಷ್ಟೇ ಅಲ್ಲದೆ, ಪ್ರಾಸಿಕ್ಯೂಷನ್ ಸಾಕ್ಷಿದಾರರು ಅಸಮಂಜಸ ಮತ್ತು ವ ರುಜುವಾತುಪಡಿಸಲಾಗದ ಸಾಕ್ಷ್ಯಗಳನ್ನಾಧರಿಸಿ ಅರ್ಜಿದಾರರನ್ನು ಅಪರಾಧಿಯೆಂದು ನಿರ್ಣಯಿಸಲಾಗಿದೆ ಎಂದು ವಾದಿಸಿದ್ದಾರೆ.ಈ ಘಟನೆಯು, ನಡೆಯುವುದಕ್ಕೂ ಮುಂಚೆ ಕಳೆದ ಮೂರು ವರ್ಷಗಳಿಂದ ಮೊದಲನೆಯ ಆಪಾದಿತ ಮತ್ತು ದೂರುದಾರರು ವಾಸಿಸುತ್ತಿದ್ದ ಬಾಡಿಗೆ ಆವರಣದ ಮನೆಯ ಮಾಲೀಕರಾಗಿದ್ದ 8 ನೇ ಪ್ರಾಸಿಕ್ಯೂಷನ್ ಸಾಕ್ಷಿದಾರರಾದ ಮಂಗಳಮ್ಮನು ಪತಿ ಮತ್ತು ಪತ್ನಿಯರ ನಡುವಿನ ಜಗಳದ ಬಗ್ಗೆ ಮತ್ತು 1 ನೇ ಆಪಾದಿತನು ವರದಕ್ಷಿಣೆಗಾಗಿ ಒತ್ತಾಯಿಸಿ ಆಕೆಗೆ ಕಿರುಕುಳ ನೀಡುತ್ತಿದ್ದನು ಎಂಬುದಕ್ಕೆ ಸಂಬಂಧಿಸಿದಂತೆ ತನಗೇನೂ ತಿಳಿದಿಲ್ಲವೆಂದು ಸಾಕ್ಷಿ ನೀಡಿರುತ್ತಾರೆ ಎಂಬುದನ್ನು ಗಮನಿಸಬೇಕಾಗಿದೆ.ಆಕೆಯ ತವರು ಮನೆಯಿಂದ ಹೊಲಿಗೆಯಂತ್ರ, ಅರಾ, ಬಂಗಾರದ ಆಭರಣ ಹಾಗೂ 10,000/-ರೂಪಾಯಿಗಳನ್ನು ತೆಗೆದುಕೊಂಡು ಬರಬೇಕು, ಇಲ್ಲದಿದ್ದರೆ, ತಾನು ಬೇರೆಯವಳೊಂದಿಗೆ ಎರಡನೆಯ ಮದುವೆ ಮಾಡಿಕೊಳ್ಳುತ್ತೇನೆ ಎನ್ನುವ ಮೂಲಕ 1 ನೆಯ ಆಪಾದಿತನು ದೈಹಿಕ ಹಾಗೂ ಮಾನಸಿಕ ತೊಂದರೆ ಕೊಡುತ್ತಿದ್ದನೆಂಬ ಮಟ್ಟಿಗೆ ಹೇಳಿಕೆ ನೀಡಿದ್ದ 1 ನೇಯ ದೂರುದಾರಳಾದ ಪ್ರಾ.ಸಾ .1 ನೇ ಸಂಖ್ಯೆಯ ಭಾಗಮ್ಮನ ಸಾಕ್ಷ್ಯಕ್ಕೆ 8 ನೆಯ ಪ್ರಾಸಿಕ್ಯೂಷನ್ ಸಾಕ್ಷಿದಾರರ ಸಾಕ್ಷಿಯು ಪ್ರತಿಕೂಲವಾಗಿದೆ.ಮೊದಲನೆಯ ಆಪಾದಿತನು ಆಗಾಗ್ಗೆ ತನ್ನೊಂದಿಗೆ ಜಗಳವಾಡುತ್ತಿದ್ದನು ಮತ್ತು ತನಗೆ ದೈಹಿಕವಾಗಿ ಹಿಂಸೆಯನ್ನು ನೀಡುತ್ತಿದ್ದನು ಎಂದು ಒಂದನೆಯ ಪ್ರಾಸಿಕ್ಯೂಷನ್ ಸಾಕ್ಷಿ ತಿಳಿಸಿದ್ದಾಳೆ.ಪಕ್ಕದ ಮನೆಯಲ್ಲಿ ವಾಸವಾಗಿದ್ದ ಬಾಡಿಗೆ ಮನೆಯ ಮಾಲೀಕರಾದ 8 ನೆಯ ಪ್ರಾಸಿಕ್ಯೂಷನ್ ಸಾಕ್ಷಿಗೆ ಮೊದಲನೆಯ ಪ್ರಾಸಿಕ್ಯೂಷನ್ ಸಾಕ್ಷಿಗೆ ನೀಡುತ್ತಿದ್ದ ಕಿರುಕುಳದ ಬಗ್ಗೆ ಏನೂ ತಿಳಿದಿರಲಿಲ್ಲ ಎಂಬುದು ವಿಚಿತ್ರ ಸಂಗತಿಯಾಗಿದ್ದು, ಇದು ಪ್ರಾಸಿಕ್ಯೂಷನ್ನಿಂದ ರೂಪಿಸಿದ ಮೊಕದ್ದಮೆಯ ಬಗ್ಗೆ ಅನುಮಾನಗಳನ್ನು ಹುಟ್ಟು ಹಾಕಿರುತ್ತಾರೆ.ಎಲ್ಲಾ ಸಾಕ್ಷಿದಾರರ ಸಾಕ್ಷ್ಯದಲ್ಲಿ ತುಂಬಾ ಅಸಂಗತ ಸ ೦ ಗತಿಗಳಿವೆ.ಅಧಿ ವಿಚಾರಣಾ ನ್ಯಾಯಾಲಯ ಹಾಗೂ ಅಪಿಲು ನ್ಯಾಯಾಲಯಗಳೆರಡೂ ಎಲ್ಲಾ ಸಾಕ್ಷಿದಾರರ ಸಾಕ್ಷ್ಯವನ್ನು ಸೂಕ್ತ ದೃಷ್ಟಿಕೋನದಿಂದ ವಿವೇಚಿಸಿರುವುದಿಲ್ಲ.ಅಂದರೆ 02 ರಿಂದ 05 ರವರೆಗಿನ ಸಂಖ್ಯೆಯ ಎಲ್ಲಾ ಆರೋಪಿಗಳು ಆರೋಪಸಂಖ್ಯೆ: 01 ಮತ್ತು ಫಿರ್ಯಾದುದಾರರಿಂದ ಬಹಳ ದೂರದಲ್ಲಿ ವಾಸಿಸುತ್ತಿದ್ದರೂ, ಮೊದಲನೆಯ ಪ್ರಾಸಿಕ್ಯೂಷನ್ ಸಾಕ್ಷಿಯ ಫಿರ್ಯಾದುದಾರರು ಆರೋಪಿಗಳೆಲ್ಲರೂ ಆಕೆಗೆ ಕಿರುಕುಳ ನೀಡುತ್ತಿದ್ದರೆಂದು ಸುಳ್ಳು ಆರೋಪವನ್ನು ಮಾಡಿದ್ದರು.ಅಧಿವಿಚಾರಣಾ ನ್ಯಾಯಾಲಯವು, ಫಿರ್ಯಾದುದಾರರ ಆರೋಪ ನಿಜವಲ್ಲ

ಎಂಬ ಅಂಶವನ್ನು ಸರಿಯಾಗಿ ಗಮನಿಸಿ, ಆಪಾದಿತರಾದ 02 ರಿಂದ 05 ರವರೆಗಿನ ಆರೋಪಿಗಳನ್ನು ಆರೋಪಿತ ಅಪರಾಧಗಳಿಂದ ಖುಲಾಸೆಗೊಳಿಸಿದ್ದು, ಈ ತೀರ್ಪನ್ನು ಅಪೀಲು ನ್ಯಾಯಾಲಯವು ಸಹ ಸ್ಥಿರೀಕರಿಸಿರುತ್ತದೆ.ಫಿರ್ಯಾದಿದಾರರು ಪ್ರಾಮಾಣಿಕ ನ್ಯಾಯಾಪೇಕ್ಷೆಯಿಂದ ಈ ನ್ಯಾಯಾಲಯಕ್ಕೆ ಬಂದಿರುವುದಿಲ್ಲವಾದ್ದರಿಂದ ಮತ್ತು ಎಲ್ಲಾ ಆಪಾದಿತ ವ್ಯಕ್ತಿಗಳ ವಿರುದ್ಧ ಸುಳ್ಳು ಮೊಕದ್ದಮೆಯನ್ನು ಹೂಡಿರುವುದರಿಂದ, ಅಧಿವಿಚಾರಣಾ ನ್ಯಾಯಾಲಯಗಳು ಆರೋಪಿಸಂಖ್ಯೆ: 01 ನ್ನು ಮತ್ತು ಆಪಾದಿಸಲಾದ ಅಪರಾಧಗಳನ್ನು ಖುಲಾಸೆಗೊಳಿಸಬೇಕಾಗಿತ್ತು.

ಅಲ್ಲದೆ, ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ಬೆಂಬಲಿಸಿದ ಎಲ್ಲಾ ಸಾಕ್ಷಿದಾರರು ಫಿರ್ಯಾದುದಾರರಾದ ಮೊದಲನೆಯ ಪ್ರಾಸಿಕ್ಯೂಷನ್ ಸಾಕ್ಷಿಗೆ ಸಂಬಂಧಿಸಿರುವ ಹಿತಾಸಕ್ತಿಯುಳ್ಳ ಸಾಕ್ಷಿದಾರರಾಗಿದ್ದಾರೆ.ಆದ್ದರಿಂದ ಅಧೀನ ನ್ಯಾಯಾಲಯಗಳು ಹಿತಾಸಕ್ತಿಯುಳ್ಳ ಸಾಕ್ಷಿದಾರರ ಹೇಳಿಕೆಗಳನ್ನಾಧರಿಸಿಯೇ ಆರೋಪಿಯನ್ನು ಸಂಪೂರ್ಣವಾಗಿ ಶಿಕ್ಷಿಸಬಾರದಿತ್ತು.ಆದ್ದರಿಂದ ಅಧಿವಿಚಾರಣಾ ನ್ಯಾಯಾಲಯಗಳೆರಡೂ ಸಾಕ್ಷಿದಾರರ ಸಾಕ್ಷ್ಯಗಳ ವಿಶ್ವಾಸಾರ್ಹತೆ ಮತ್ತು ನೈಜತೆಯನ್ನು ಪರಿಶೀಲಿಸದೆ, ಯಾಂತ್ರಿಕವಾಗಿ ಸಾಕ್ಷ್ಯಗಳನ್ನು ವಿವೇಚಿಸುವಲ್ಲಿ ತಪ್ಪೆಸಗಿವೆ ಎಂದು ಮಾನ್ಯ ನ್ಯಾಯಾವಾದಿಗಳು ಅಭಿಪ್ರಾಯಪಟ್ಟಿರುತ್ತಾರೆ.

ಆದ್ದರಿಂದ,ದಿನಾಂಕ: 27-04-2006 ರಂದು ಸಿ.ಸಿ.ಸಂಖ್ಯೆ:504/2002 ರಲ್ಲಿ ಅಧಿ ವಿಚಾರಣಾ ನ್ಯಾಯಾಲಯವು ಹೊರಡಿಸಿದ ಮತ್ತುದಿನಾಂಕ: 07-03-2011 ರ ಆದೇಶದ ಮೂಲಕ ಅಪರಾಧ ಅಪೀಲುಸಂಖ್ಯೆ: 107/2006 ರಲ್ಲಿ ಅಪೀಲು ನ್ಯಾಯಾಲಯವು ಭಾಗಶಃ ಸ್ಥಿರೀಕರಿಸಿದ್ದ ನಿರ್ಣೀತ ಅಪರಾಧಕ್ಕೆ ಮತ್ತು ಶಿಕ್ಷೆಯ ಆದೇಶವನ್ನು ರದ್ದುಗೊಳಿಸುವಂತೆ ಮತ್ತು ಭಾರತ ದಂಡ ಸಂಹಿತೆಯ 498 ಎ ಪ್ರಕರಣದ ಮೇರೆಗೆ ಮತ್ತು ವರದಕ್ಷಿಣೆ ನಿಷೇಧ ಅಧಿನಿಯಮದ 136 ಶ್ರೀ ನಾಗಲಿಂಗಪ್ಪ ವಿರುದ್ಧ ಕರ್ನಾಟಕ ರಾಜ್ಯ, ಮಹಿಳಾ ಪೊಲೀಸ್ ಠಾಣೆ, ಮೈಸೂರು 4 ನೇ ಪ್ರಕರಣದ ಮೇರೆಗಿನ ಅಪರಾಧಗಳಿಂದ ಅರ್ಜಿದಾರರನ್ನು ಖುಲಾಸೆಗೊಳಿಸುವಂತೆ ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಕೋರಿದ್ದಾರೆ.

5. ಇದಕ್ಕೆ ತದ್ವಿರುದ್ಧವಾಗಿ, ರಾಜ್ಯದ ಪರ ಉಚ್ಚ ನ್ಯಾಯಾಲಯದ ಸರ್ಕಾರಿ ಚ ಫೀಡರ್ ಭಾರತ ದಂಡ ಸಂಹಿತೆಯ 498 ಎ ಪ್ರಕರಣ ಮತ್ತು ವರದಕ್ಷಿಣೆ ನಿಷೇಧ ಅಧಿನಿಯಮದ 4 ನೇ ಪ್ರಕರಣದ ವ್ಯಾಪ್ತಿ ಹಾಗೂ ಉದ್ದೇಶದ ಕಡೆ ನನ್ನ ಗಮನ ಸೆಳೆದಿದ್ದಾರೆ.1 ನೇ ಆಪಾದಿತನು ಫಿರ್ಯಾದುದಾರನ ಮೇಲೆ ಆ್ಯಸಿಡನ್ನು ಎರೆಚುವುದಾಗಿ ಹೇಳಿದ್ದನೆಂಬ 4 ನೇ ಪ್ರಾಸಿಕ್ಯೂಷನ್ ಸಾಕ್ಷಿಯ ಹೇಳಿಕೆಯನ್ನು ಬೆಂಬಲಿಸಲು ಯಾವುದೇ ರೀತಿಯ ಸಾಕ್ಷ್ಯಗಳಿರುವುದಿಲ್ಲ ಎಂಬ ದೃಷ್ಟಿಯಿಂದ ಭಾರತ ದಂಡ ಸಂಹಿತೆಯ 506 ನೇ ಪ್ರಕರಣದ ಮೇರೆಗೆ ಅಪರಾಧದಿಂದ ಅಪೀಲು ನ್ಯಾಯಾಲಯವು ಅರ್ಜಿದಾರರನ್ನು ಖುಲಾಸೆಗೊಳಿಸಿದ್ದಾಗ್ಯೂ, ಆಕೆಯ ತವರುಮನೆಯಿಂದ ವರದಕ್ಷಿಣೆಯನ್ನು ತೆಗೆದುಕೊಂಡು ಬರಲು ಫಿರ್ಯಾದುದಾರಳಿಗೆ ದೈಹಿಕವಾಗಿಯಾಗಲಿ ಅಥವಾ ಮಾನಸಿಕವಾಗಿಯಾಗಲಿ ಆಪಾದಿತನು ಹಿಂಸೆಯನ್ನು ನೀಡಿರಲಿಲ್ಲವೆಂದು ಹೇಳಲಾಗುವುದಿಲ್ಲ ಎಂದು ಅವರು ವಾದಿಸುತ್ತಾರೆ.ಆದ್ದರಿಂದ, ಭಾರತ ದಂಡ ಸಂಹಿತೆಯ 506 ನೇ ಪ್ರಕರಣದ ಮೇರೆಗೆ ಮತ್ತು ವರದಕ್ಷಿಣೆ ನಿಷೇಧ ಅಧಿನಿಯಮದ 4 ನೇ ಪ್ರಕರಣದ ಮೇರೆಗೆ ಆರೋಪಿಯನ್ನು ಅಪರಾಧದ ತಪ್ಪಿತಸ್ಥರೆಂದು ಅಪೀಲು ನ್ಯಾಯಾಲಯವು ಸರಿಯಾಗಿಯೇ ಪರಿಗಣಿಸಿದೆಯೆಂದು ಅವರು ವಾದಿಸುತ್ತಾರೆ.ಆದ್ದರಿಂದ, ಅಪೀಲು ನ್ಯಾಯಾಲಯವು ಹೊರಡಿಸಿದ ಆದೇಶವು ನ್ಯಾಯೋಚಿತವಾಗಿದ್ದು, ಸೂಕ್ತವಾಗಿದೆ ಹಾಗೂ ಈ ಪುನರೀಕ್ಷಣಾ

ಅರ್ಜಿಯಲ್ಲಿ ಯಾವುದೇ ಹಸ್ತಕ್ಷೇಪ ಮಾಡುವ ಅಗತ್ಯಗಳಿಲ್ಲವೆಂದು ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ಪೀಡರ್ರು ವಾದಿಸಿದ್ದಾರೆ.ಚ

6. ಅರ್ಜಿದಾರ-ಆಪಾದಿತರ ಪರ ಹಾಜರಾದ ಮಾನ್ಯ ನ್ಯಾಯವಾದಿ ಮತ್ತು ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ಪೀಡರ್ರು ಮಂಡಿಸಿದ ವಾದಗಳನ್ನು ಚ ಎಚ್ಚರಿಕೆಯಿಂದ ಸೂಕ್ಷ್ಮವಾಗಿ ಪರಿಶೀಲಿಸಿದ ಮೇಲೆ ಹಾಗೂ ದಾಖಲೆಯಲ್ಲಿರುವ ಸಾಕ್ಷ್ಯಾಧಾರಗಳನ್ನು ಪರಿಗಣಿಸಿದಾಗ, ಕಾನೂನುಬದ್ಧವಾಗಿ ಸ್ವೀಕಾರ್ಹ ಹಾಗೂ ನಿರ್ಣಾಯಕ ಸಾಕ್ಷ್ಯಾಧಾರಗಳು ಇಲ್ಲದಿದ್ದರೂ, ಅರ್ಜಿದಾರನ ಅಪರಾಧ ನಿರ್ಣಯಿಸುವಲ್ಲಿ ಅಧಿವಿಚಾರಣಾ ನ್ಯಾಯಾಲಯವು ತಪ್ಪೆಸಗಿರುವುದು ಕಂಡುಬರುತ್ತದೆ.ಭಾರತ ದಂಡ ಸಂಹಿತೆಯ 498 ಎ ಮತ್ತು 506 ನೇ ಪ್ರಕರಣಗಳ ಮೇರೆಗೆ ಹಾಗೂ ವರದಕ್ಷಿಣೆ ನಿಷೇಧ ಅಧಿನಿಯಮದ 4 ನೇ ಪ್ರಕರಣದ ಮೇರೆಗೆ ಆರೋಪಗಳಿಗೆ ಸಂಬಂಧಿಸಿದಂತೆ ಪ್ರಾಸಿಕ್ಯೂಷನ್ ಯಾವುದೇ ತರ್ಕಬದ್ಧವಾದ ಹಾಗೂ ಸ್ಥಿರವಾದ ಸಾಕ್ಷ್ಯಗಳನ್ನು ನೀಡಿಲ್ಲವೆಂದು ಕಂಡುಬಂದಿದೆ.ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ವಾದಿಸಿರುವಂತೆ, ಈ ಘಟನೆಯು ನಡೆಯುವುದಕ್ಕೂ ಮುಂಚೆ ಕಳೆದ ಮೂರು ವರ್ಷಗಳಿಗಿಂತಲೂ ಮೊದಲನೆಯ ಆಪಾದಿತ ಹಾಗೂ ಫಿರ್ಯಾದುದಾರಳು ವಾಸಿಸುತ್ತಿದ್ದ ಬಾಡಿಗೆ ಮನೆಯ ಮಾಲೀಕರಾಗಿದ್ದ 8 ನೇ ಪ್ರಾಸಿಕ್ಯೂಷನ್ ಸಾಕ್ಷಿದಾರರಾದ ಮಂಗಳಮ್ಮನಿಗೆ, ಪತಿ ಹಾಗೂ ಪತ್ನಿಯವರ ನಡುವಿನ ಜಗಳದ ಬಗ್ಗೆಯಾಗಲೀ ಮತ್ತು 1 ನೇ ಆಪಾದಿತನು ಆಕೆಗೆ ವರದಕ್ಷಿಣೆ ತರುವಂತೆ ಆಕೆಗೆ ಕಿರುಕುಳವನ್ನು ನೀಡುತ್ತಿದ್ದನು ಎಂಬುದರ ಬಗ್ಗೆಗಾಗಲೀ ಏನು ತಿಳಿದಿರಲಿಲ್ಲವೆಂಬುದು ಆಶ್ಚರ್ಯವೆನಿಸುತ್ತದೆ.ಆದಾಗ್ಯೂ, 1 ನೇ ಆಪಾದಿತನು ಫಿರ್ಯಾದುದಾರಳಿಗೆ ದೈಹಿಕ ಹಿಂಸೆಯನ್ನು ನೀಡುತ್ತಿದ್ದನೆಂಬುದನ್ನು 1 ನೇ ಪ್ರಾಸಿಕ್ಯೂಷನ್ ಸಾಕ್ಷಿಯ ತಾಯಿ ಮತ್ತು ತಂಗಿಯಾಗಿರುವ 3 ನೇ ಮತ್ತು 4 ನೇ ಪ್ರಾಸಿಕ್ಯೂಷನ್ ಸಾಕ್ಷಿದಾರರು ಸಾಕ್ಷಿಯನ್ನು ನೀಡಿದ್ದಾರೆ.ಆದ್ದರಿಂದ, 1 ನೇ ಪ್ರಾಸಿಕ್ಯೂಷನ್ ಸಾಕ್ಷಿಯಾದ ಭಾಗ್ಯಮ್ಮ ಹಾಗೂ 3 ನೇ ಪ್ರಾಸಿಕ್ಯೂಷನ್ ಸಾಕ್ಷಿಯಾದ ನಿಂಗಮ್ಮ ಮತ್ತು 4 ನೇ ಪ್ರಾಸಿಕ್ಯೂಷನ್ ಸಾಕ್ಷಿಯಾದ ರಾಜೇಶ್ವರಿ ಇವರ ಸಾಕ್ಷ್ಯಗಳಿಗೆ 8 ನೇ ಪ್ರಾಸಿಕ್ಯೂಷನ್ ಸಾಕ್ಷ್ಯವು ಪ್ರತಿಕೂಲವಾಗಿದೆ.ಮೊದಲನೆಯ ಆಪಾದಿತನು ಆಗಾಗ್ಗೆ ಆಕೆಯೊಂದಿಗೆ ಜಗಳವಾಡುತ್ತಿದ್ದನು ಹಾಗೂ ಆಕೆಗೆ ದೈಹಿಕವಾಗಿ ಹಿಂಸೆಯನ್ನು ನೀಡುತ್ತಿದ್ದನೆಂದು ಕೂಡ ಮೊದಲನೆಯ ಪ್ರಾಸಿಕ್ಯೂಷನ್ ಸಾಕ್ಷಿ ತಿಳಿಸಿರುತ್ತಾರೆ.ಪಕ್ಕದ ಮನೆಯಲ್ಲಿ ವಾಸವಾಗಿದ್ದ, ಬಾಡಿಗೆ ಮನೆಯ ಮಾಲೀಕ 8 ನೇ ಪ್ರಾಸಿಕ್ಯೂಷನ್ ಸಾಕ್ಷಿಯು, ಮೊದಲನೆಯ ಪ್ರಾಸಿಕ್ಯೂಷನ್ ಸಾಕ್ಷಿಯು, ನೀಡಿದ ತೊಂದರೆಯ ಬಗ್ಗೆ ಏನೂ ಗೊತ್ತಿಲ್ಲವೆಂದು ಹೇಳಿರುವುದು ವಿಚಿತ್ರ ೧ ಸಂಗತಿಯಾಗಿದ್ದು ಇದು, ಪ್ರಾಸಿಕ್ಯೂಷನ್ನ ಮೊಕದ್ದಮೆಯ ಬಗ್ಗೆ ಗಂಭೀರ ಅನುಮಾನವನ್ನು ಮೂಡಿಸುತ್ತದೆ.ಹಿತಾಸಕ್ತಿಯ ಸಾಕ್ಷ್ಯಗಳು ಮಾತ್ರ ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ಬೆಂಬಲಿಸಿರುವುದರಿಂದ 1 ನೇ ಆರೋಪಿಯು ಫಿರ್ಯಾದುದಾರರಿಗೆ ನೀಡಿದನೆಂದು ಹೇಳಲಾದ ಕಿರುಕುಳವನ್ನು ಪ್ರಾಸಿಕ್ಯೂಷನ್ ಸಮರ್ಪಕವಾಗಿ, ಸಮರ್ಥವಾಗಿ ಹಾಗೂ ಅಂಗೀಕಾರಾರ್ಹವಾದ ಸಾಕ್ಷ್ಯಗಳಿಂದ ಸಾಬೀತು ಪಡಿಸಿಲ್ಲವೆಂದು ನನಗೆ ಕಂಡುಬರುತ್ತದೆ.ಎಲ್ಲಾ ಸಾಕ್ಷಿಗಳ ಸಾಕ್ಷ್ಯಗಳಲ್ಲಿ ಸಹ ಅಸಮಂಜತೆ ಕಂಡುಬರುತ್ತದೆ.ಅಧಿವಿಚಾರಣಾ ನ್ಯಾಯಾಲಯ ಹಾಗೂ ಅಪೀಲು ನ್ಯಾಯಾಲಯಗಳೆರಡೂ, ಎಲ್ಲಾ ಸಾಕ್ಷಿದಾರರ ಸಾಕ್ಷ್ಯವನ್ನು ಸರಿಯಾಗಿ ವಿವೇಚಿಸಿರುವುದಿಲ್ಲ.ಇತರ ಎಲ್ಲಾ ಆರೋಪಗಳು, ಅಂದರೆ, ಸಂಖ್ಯೆ 2 ರಿಂದ 5 ರವರೆಗಿನ ಆರೋಪಿಗಳವರೆಗೆ 1 ನೇ ಆರೋಪಿ ಮತ್ತು ಫಿರ್ಯಾದುದಾರರಿಂದ ಬಹಳ ದೂರದಲ್ಲಿ ವಾಸಿಸುತ್ತಿದ್ದರೂ, ಪಿಡಬ್ಲ್ಯು -1, ಫಿರ್ಯಾದುದಾರರು ಆರೋಪಿಗಳೆಲ್ಲರೂ ಆಕೆಗೆ ಕಿರುಕುಳ ನೀಡುತ್ತಿದ್ದರೆಂಬುದಾಗಿ ಸುಳ್ಳು ಆರೋಪವನ್ನು ಮಾಡಿದ್ದಾರೆ.ಅಧಿವಿಚಾರಣಾ ನ್ಯಾಯಾಲಯವು ಫಿರ್ಯಾದುದಾರರ ಆರೋಪ ನಿಜವಲ್ಲವೆಂಬ ಅಂಶವನ್ನು

ಸರಿಯಾಗಿ ಗಮನಿಸಿದೆ.02 ರಿಂದ 05 ರವರೆಗಿನ ಆರೋಪಿಗಳನ್ನು ಆರೋಪಿತ ಅಪರಾಧಗಳಿಂದ ಖುಲಾಸೆಗೊಳಿಸಿದೆ.ಈ ತೀರ್ಪನ್ನು ಅಪೀಲು ನ್ಯಾಯಾಲಯವು ಸಹ ಸ್ಥಿರಪಡಿಸಿರುತ್ತದೆ.ಆದ್ದರಿಂದ, ಅಧೀನ ನ್ಯಾಯಾಲಯಗಳು 1 ನೇ ಆಪಾದಿತನ ಹಾಗೂ ಆಪಾದಿತ ಅಪರಾಧಗಳನ್ನು ಖುಲಾಸೆಗೊಳಿಸಬೇಕಾಗಿತ್ತೆಂಬುದು ನನ್ನ ಅಭಿಪ್ರಾಯವಾಗಿದೆ.

7. ಸಾಕ್ಷಿಗಳ ಸಾಕ್ಷ್ಯವನ್ನು ಗಮನಿಸಿದಾಗ, ಸಾಕ್ಷಿದಾರರ ಸಾಕ್ಷ್ಯವು ಪರಸ್ಪರ ಪೂರಕವಾಗಿಲ್ಲವೆಂಬುದು ಕಂಡುಬರುತ್ತದೆ.ಅಲ್ಲದೆ, ಪ್ರಾಸಿಕ್ಯೂಷನ್ ಮಂಡಿಸಿದ ವಾದದಲ್ಲಿ ಅಸಮಂಜಸತೆ ಹಾಗೂ ವೈರುಧ್ಯತೆ ಕಂಡುಬರುತ್ತದೆ.ಅಸಮಂಜಸತೆ ಹಾಗೂ ವೈರುಧ್ಯತೆ ಇದ್ದಾಗ ಸಂಶಯದ ಲಾಭವು ಆಪಾದಿತನ ಪರವಾಗಿರತಕ್ಕದ್ದು.ಆದ್ದರಿಂದ, ಎಲ್ಲಾ ಯುಕ್ತ ಸಂದೇಹಗಳನ್ನು ಮೀರಿ, ಭಾರತ ದಂಡ ಸಂಹಿತೆಯ 498 ಎ ಪ್ರಕರಣದ ಮೇರೆಗೆ ಮತ್ತು ವರದಕ್ಷಿಣೆ ನಿಷೇಧ ಅಧಿನಿಯಮದ 4 ನೇ ಪ್ರಕರಣದ ಮೇರೆಗಿನ ಅಪರಾಧಕ್ಕಾಗಿ ಅರ್ಜಿದಾರ-ಅರ್ಜಿದಾರನ ತಪ್ಪನ್ನು ಸ್ಥಿರಪಡಿಸಲು ಪ್ರಾಸಿಕ್ಯೂಷನ್ ವಿಫಲವಾಗಿರುತ್ತದೆಂದು ನಾನು ಭಾವಿಸಿರುತ್ತೇನೆ.

ತತ್ಪರಿಣಾಮವಾಗಿ, ಅರ್ಜಿದಾರ/ಆಪಾದಿತನು ಬಿಡುಗಡೆಗೆ ಅರ್ಹನಾಗಿದ್ದಾನೆ.ತದನುಸಾರವಾಗಿ, ನಾನು ಈ ಮುಂದಿನ ಆದೇಶವನ್ನು ಹೊರಡಿಸುತ್ತೇನೆ:

ಆದೇಶ

ಈ ಪುನರೀಕ್ಷಣಾ ಅರ್ಜಿಯನ್ನು ಪುರಸ್ಕರಿಸಲಾಗಿದೆ.ಅಧಿವಿಚಾರಣಾ ನ್ಯಾಯಾಲಯವು, ಸಿ.ಸಿ.ಸಂಖ್ಯೆ:504/2002,ದಿನಾಂಕ: 27-04-2006 ರಲ್ಲಿ ಹೊರಡಿಸಲಾದ ಪ್ರಶ್ನಿತ ಆದೇಶವನ್ನು ಹಾಗೂ ಅಪೀಲು ನ್ಯಾಯಾಲಯವು, ಅಪರಾಧ ಅಪೀಲುಸಂಖ್ಯೆ: 107/2006,ದಿನಾಂಕ: 07-03-2011 ರಲ್ಲಿ ಹೊರಡಿಸಲಾದ ಪ್ರಶ್ನಿತ ಆದೇಶವನ್ನು ಈ ಮೂಲಕ ತಳ್ಳಿಹಾಕಲಾಗಿದೆ.ಭಾರತ ದಂಡ ಸಂಹಿತೆಯ 498- ಎ ಪ್ರಕರಣದ ಮೇರೆಗೆ ಹಾಗೂ ವರದಕ್ಷಿಣೆ ನಿಷೇಧ ಅಧಿನಿಯಮದ 4 ನೇ ಪ್ರಕರಣದ ಮೇರೆಗೆ ದಂಡನೀಯವಾಗಬಹುದಾದ ಅಪರಾಧಗಳಿಂದ ಅರ್ಜಿದಾರನಾದ-ಆರೋಪಿಯನ್ನು ಖುಲಾಸೆಗೊಳಿಸಲಾಗಿದೆ.